1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ: 1202/2013

ಚಾಸಾ: 21 ಪ್ರಾಸಾ:4

ದಿನಾಂಕ: 03.06.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಜಯರಾಮ ಡಿ ಗೌಡ |
| ತಂದೆಯ ಹೆಸರು | : | ಡಿ ಎಂ ಗೌಡ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಪೊಲೀಸ್ ನಿರೀಕ್ಷಕರು, ಕುಂದಾಪುರ ಪೊಲೀಸ್ ಠಾಣೆ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ಸಪ್ಟೆಂಬರ್ 2012 ರಿಂದ ಫೆಬ್ರವರಿ 2014ರವರೆಗೆ ಕುಂದಾಪುರದ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 05-01-2013 ರಂದು ರಾತ್ರಿ 10 ಗಂಟೆ ಸಮಯಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೆ 6/2013 ಕಲಂ 279, 337, 304ಎ ಐಪಿಸಿ ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹೆಚ್.ಸಿ1764 ರವರ ಮುಖಾಂತರ ಹಾಗೂ ಇನ್ನೊಂದು ಪ್ರತಿಯನ್ನು ಮೇಲಾಧಿಕಾರಿಯವರಿಗೆ ಮೇಲ್ ಮುಖಾಂತರ ಕಳುಹಿಸಿ ಕೊಟ್ಟಿರುತ್ತೇನೆ.

ಈಗ ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪ್ರ.ವ.ವರದಿಯನ್ನು ತೋರಿಸಲಾಗಿದ್ದು, ಅದನ್ನು ನಿಪಿ-7 ಎಂದು, ಅದರಲ್ಲಿರುವ ತಮ್ಮ

ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ದಿಃ 06-01-2013 ರಂದು ಬೆಳಗ್ಗೆ 6 ರಿಂದ 8 ಗಂಟೆಯವರೆಗೂ ಸಾಕ್ಷಿದಾರರಾದ ಚಾಸಾ-12 ರಿಂದ 14 ರವರ ಸಮಕ್ಷಮ ಶವ ತನಿಖಾ ವರದಿಯನ್ನು ಕೈಗೊಂಡಿರುತ್ತೇನೆ. ಆ ಸಮಯದಲ್ಲಿ ಚಾಸಾ-9 ಮತ್ತು 15 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ಈಗ ಸಾಕ್ಷಿಗೆ ಶವ ತನಿಖಾ ವರದಿಯನ್ನು ತೋರಿಸಲಾಗಿದ್ದು, ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಶವ ತನಿಖಾ ವರದಿಯನ್ನು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ನಂತರ ಕೃತ್ಯ ಸ್ಥಳಕ್ಕೆ ತೆರಳಿ ಸಾಕ್ಷಿ ಚಾಸಾ-9 ರವರು ತೋರಿಸಿದ ಕೃತ್ಯ ಸ್ಥಳವನ್ನು ಚಾಸಾ-7 ಮತ್ತು 8 ರವರ ಸಮಕ್ಷಮ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೂ ಮಹಜರು ಕ್ರಮವನ್ನು ಜರುಗಿಸಿರುತ್ತೇನೆ. ಆ ಸಮಯದಲ್ಲಿ ಸ್ಥಳದಲ್ಲಿ ಇದ್ದ ಅಪಘಾತಕ್ಕೆ ಒಳಗಾದ ಬೈಕು ನಂಬ್ರ ಕೆಎ-20-ಇಸಿ-0672 ಮತ್ತು ಟೆಂಪೋ ನಂಬ್ರ ಕೆಎ-20-ಸಿ-4779 ವಾಹನಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ.

ಈಗ ಸಾಕ್ಷಿಗೆ ತಕ್ಷೀರು ಸ್ಥಳದ ಮಹಜರು ತೋರಿಸಲಾಗಿದ್ದು, ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜರನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಕಚ್ಚಾ ನಕಾಶೆಯನ್ನು ತೋರಿಸಲಾಗಿದ್ದು ನೋಡಿ ಗುರುತಿಸಿದ್ದು, ಕಚ್ಚಾ ನಕಾಶೆಯನ್ನು ನಿಪಿ-10 ಎಂದು, ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಕೃತ್ಯ ಸ್ಥಳದ ಹಾಗೂ ಅಪಘಾತಕ್ಕೆ ಒಳಗಾದ ವಾಹನಗಳ ಪೋಟೋಗಳನ್ನು ತೆಗೆಸಿರುತ್ತೇನೆ. ಈಗ ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿದ್ದು ನೋಡಿ ಗುರುತಿಸಿರುತ್ತಾರೆ. ಸದ್ರಿ ಪೋಟೋಗಳನ್ನು ನಿಪಿ-11 ರಿಂದ 13 ಎಂದು ಗುರುತಿಸಲಾಯಿತು.

ನಂತರ ಸಾಕ್ಷಿದಾರರಾದ ಚಾಸಾ-4 ರವರಾದ ನಾಗರಾಜರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅಪಘಾತಕ್ಕೆ ಒಳಗಾದ ವಾಹನಗಳ ಯಾಂತ್ರಿಕ ಪರೀಕ್ಷೆ ನಡೆಸಿ ವರದಿ ನೀಡುವಂತೆ ಚಾಸಾ-17 ರವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-22 ರವರಿಗೆ ಹಸ್ತಾಂತರಿಸಿರುತ್ತೇನೆ.

**ಆರೋಪಿಗಳು ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

<u>**ಮರು ವಿಚಾರಣೆಃ** ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**